


ಶಿಕ್ಷಕರು ತೂಕಡಿಸುತ್ತಿದ್ದ ವಿದ್ಯಾರ್ಥಿಯನ್ನು ಎಬ್ಬಿಸಿ, ಸ್ಟೀಮ್ ಎಂಜಿನನ್ನು ಕಂಡು ಹಿಡಿದವರು ಯಾರು? ಎಂದು ಕೇಳಿದರು.

ವಿದ್ಯಾರ್ಥಿ: ನಿದ್ದೆಯ ಮಂಪರಿನಲ್ಲಿಯೆ ಕೇಳಿದ, ವ್ಹಾಟ್ ಸರ್?

ಶಿಕ್ಷಕರು: ಗುಡ್ ಜೇಮ್ಸ್, ವಾಟ್ ಸ್ಟೀಮ್ ಎಂಜಿನನ್ನು ಕಂಡುಹಿಡಿದ, ಕುಳಿತುಕೋ.

ನೀತಿ: ನಿದ್ರೆ ಸಾಮಾನ್ಯ ಜ್ಞಾನವನ್ನು ಸುಧಾರಿಸುತ್ತದೆ. ಆದ್ದರಿಂದ ಚೆನ್ನಾಗಿ ನಿದ್ರಿಸಿ. ಎಲ್ಲೆಂದರಲ್ಲಿ!

★★★

ಒಬ್ಬ ಗ್ರಾಹಕ ಕಸ್ಟಮರ್ ಕೇರ್‌ಗೆ ಫೋನ್ ಮಾಡಿ ಕೇಳಿದ– ಸರ್ ಎಸ್‌ಸಿ., ಎಸ್‌ಟಿ.ಯವರಿಗೆ ಏನಾದರೂ ಆಫರ್ ಇದೆಯಾ!

–ಶೀಲಾ ಸತ್ಯೇಂದ್ರ ಸ್ವಾಮಿ, ಚಾಮರಾಜನಗರ

## 'ಶಿಶುವಿಹಾರ'

ಜಬೀನ: 'ನಿನಗೆ ಹನ್ನೊಂದು ಮಕ್ಕಳಿದ್ದಾರೆ. ನಿನ್ನ ಮನೆಗೆ ಯಾವ ಕುಟುಂಬ ಕಲ್ಯಾಣ ಯೋಜನೆಯ ಅಧಿಕಾರಿಯೂ ಬರಲಿಲ್ಲವೇ?'

ನಗ್ಮಾ: 'ಬಂದಿರಬೇಕು. ಆದರೆ ಇದು 'ಶಿಶುವಿಹಾರ' ಎಂದು ಅರಿತುಕೊಂಡು ವಾಪಸ್ಸು ಹೋಗಿರಬೇಕು.'

–ಅಯಾನ್ ಬಕ್ಷ್, ಮಧುಗಿರಿ



ಗುಂಡ: ಹೊಟ್ಟೆ ಉರಿ, ಸಂಕಟ ಡಾಕ್ಟ್ರೆ.

ಡಾಕ್ಟರು: ಏನು ತಿಂದಾಗ ಹೀಗಾಗುತ್ತೆ?

ಗುಂಡ: ತಿಂದಾಗ ಅಲ್ಲ. ನಮ್ಮ ಪಕ್ಕದ ಮನೆಯವನು ಮಹಡಿ ಮೇಲೆ ಮಹಡಿ ಕಟ್ಟಿಸುವುದನ್ನು, ಮನೆ ಮುಂದೆ ನಿಲ್ಸಿರೋ ಕಾರನ್ನು ನೋಡಿದಾಗ.

★★★

ನರ್ಸಿಂಗ್ ಹೋಂಗೆ ಓಡಿ ಬಂದ ಗುಂಡ: ಡಾಕ್ಟ್ರೆ, ಈಗ್ಲೇ ನನ್ನನ್ನು ಐಸಿಯುಗೆ ಹಾಕಿ ಪ್ಲೀಸ್. ನನ್ನಾಕೆಗೆ ಗೊತ್ತಾಗಿ ಬಿಟ್ಟಿದೆ.

ಡಾಕ್ಟರು: ಏನು ಗೊತ್ತಾಗಿರೋದು?

ಗುಂಡ: ಕಾನ್‌ಫರೆನ್ಸ್‌ಗೆ ಅಂತ ಹೇಳಿ, ಪಿಎ.ನ ರೆಸಾರ್ಟ್‌ಗೆ ಕರೆದುಕೊಂಡು ಹೋಗಿದ್ದು!

–ಹಾಡ್ಯ ಬಿ. ಜಯಾನಂದ, ಮೈಸೂರು

## ಎಲ್ಲಿದೆ ಪುರಾವೆ?

ಬಾಸ್ ತನ್ನ ನೌಕರನನ್ನು ಪ್ರಶ್ನಿಸಿದ, 'ನಿನಗೆ ಸಾವಿನ ನಂತರ ಜೀವನವಿದೆ ಎಂಬ ನಂಬಿಕೆಯಿದೆಯೆ?'

'ಹಾಗೇನೂ ಇಲ್ಲ, ಅದಕ್ಕೆಲ್ಲಿದೆ ಪುರಾವೆ?' ನೌಕರ ಉತ್ತರಿಸಿದ.

'ಹಾಗಾದರೆ ನೀನು ನಿನ್ನೆ, ನಿನ್ನ ಚಿಕ್ಕಪ್ಪ ತೀರಿಕೊಂಡರೆಂದು ಅಂತ್ಯ ಸಂಸ್ಕಾರಕ್ಕೆ ಹೋದೆಯಲ್ಲ. ಸಾಯಂಕಾಲ ಅವರೇ ನಿನ್ನನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದರು'!

## ಹೇಗೆ?



ಗುಂಡ ಜೀವಶಾಸ್ತ್ರ ಪರೀಕ್ಷೆಗೆ ಹಾಜರಾದ. ಪ್ರಶ್ನೆ ಪತ್ರಿಕೆ ಮೇಲೆ ಕಣ್ಣಾಡಿಸಿದ. ಪ್ರಶ್ನೆ ಹೀಗಿತ್ತು: ಇರುವೆಯನ್ನು ಕೊಲ್ಲುವುದು ಹೇಗೆ?

ಗುಂಡ ಇರುವೆ ಕೊಲ್ಲುವ ವಿಧಾನ ಹೀಗಿದೆ: ಸಕ್ಕರೆಯೊಂದಿಗೆ ಮೆಣಸಿನಪುಡಿಯನ್ನು ಬೆರೆಸಿ ಇರುವೆಯ ಗೂಡಿನ ಪಕ್ಕ ಇಡಬೇಕು. ಇದನ್ನು ತಿಂದ ಇರುವೆ ನೀರಿನ ಟ್ಯಾಂಕನ್ನು ಹುಡುಕಿಕೊಂಡು ಹೋಗುತ್ತದೆ. ತಕ್ಷಣ ಇರುವೆಯನ್ನು ಅದರಲ್ಲಿ ದೂಡಿಬಿಡಬೇಕು. ಇರುವೆ ಮೈ ಒಣಗಿಸಿಕೊಳ್ಳಲು ಆಗ ಬೆಂಕಿಯ ಬಳಿ ಬರುತ್ತದೆ. ಯಾವಾಗ ಬೆಂಕಿಯ ಬಳಿ ಬರುವುದೋ, ಆಗ ಬೆಂಕಿಯಲ್ಲಿ ಬಾಂಬನ್ನು ಇಟ್ಟುಬಿಡಿ. ಅನಂತರ ಗಾಯಗೊಂಡ ಇರುವೆಯನ್ನು ಆಸ್ಪತ್ರೆಯ ಐ.ಸಿ.ಯು.ಗೆ ಸೇರಿಸಿ. ತಡಮಾಡಬೇಡಿ ಈಗ ಅದರ ಮುಖಕ್ಕೆ ಜೋಡಿಸಿದ ಆಮ್ಲಜನಕದ ಕೊಳವೆಯನ್ನು ತೆಗೆದುಬಿಡಿ, ತಕ್ಷಣ ಇರುವೆ ಸಾಯುತ್ತದೆ.

–ಪ್ರಕಾಶ. ಎಸ್. ಮನ್ನಂಗಿ




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ



ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.